744 (1223) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ):–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿಗೆ ಬೆಳೆ ವಿಮೆಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು ;

(ಆ) ಈ ತಾಲ್ಲೂಕಿನ ರೈತರಿಗೆ ಬೆಳೆ ವಿಮೆಯಲ್ಲಿ ಇಲ್ಲಿಯವರೆಗೆ ನೀಡಿರುವ ಹಣವೆಷ್ಟು ;

(ಇ) ಬೆಳೆ ವಿಮೆಯಲ್ಲಿ ಉಳಿದಿರುವ ಹಣವನ್ನು ಅಲ್ಲಿಯ ರೈತರಿಗೆ ವಿತರಿಸಲಾಗುವುದೇ (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :–

(ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿಗೆ ಬೆಳೆ ವಿಮೆಗಾಗಿ ಬಿಡುಗಡೆ ಮಾಡಲಾದ ಹಣ 2005–06ರಲ್ಲಿ 230.12 ಲಕ್ಷ ರೂ.ಗಳು 2006–07ರಲ್ಲಿ 318.22 ಲಕ್ಷ ರೂ.ಗಳು (ಸದ್ಯದಲ್ಲೇ ವಿತರಿಸಲಾಗುವುದು).

(ಆ) ಯೋಜನೆಯು ಪ್ರಾರಂಭವಾದಾಗಿನಿಂದ 2005–06 ನೇ ಸಾಲಿನವರೆವಿಗೆ ಒಟ್ಟು ರೂ. 1151.46 ಲಕ್ಷಗಳನ್ನು ವಿತರಿಸಲಾಗಿದೆ.

(ಇ) ಹೌದು. 2006 ರ ಮುಂಗಾರು ಹಂಗಾಮಿನ ಪರಿಹಾರ ನೀಡುವಿಕೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರತೊಡನೆಯೇ ವಿತರಿಸಲಾಗುವುದು.

745 (288) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :–ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು ;

(ಆ) ಈ ಹಾಪ್‌ಕಾಮ್ಸ್ ತೋಟಗಾರಿಕೆ ಇಲಾಖೆಯ ಆಡಳಿತಾತ್ಮಕ ನಿಯಂತ್ರಣ ಇಟ್ಟುಕೊಳ್ಳಲು ನಿರ್ಧರಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ;

(ಈ) ಸಹಕಾರ ಇಲಾಖೆಯ ಉಸ್ತುವಾರಿಯಲ್ಲಿರತಕ್ಕ ಹಾಪ್‌ಕಾಮ್ಸ್ ಮೇಲೆ ತೋಟಗಾರಿಕೆ ಇಲಾಖೆ ನಿಯಂತ್ರಣ ಮಾಡುವ ನಿರ್ಧಾರವನ್ನು ಸರ್ಕಾರ ಹಿಂದಕ್ಕೆ ಪಡೆಯಲಾಗುವುದೇ ?

ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :–

(ಅ) ಬೆಂಗಳೂರು ನಗರದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ ಒಟ್ಟು 272.

(ಆ) ಹೌದು

(ಇ) ಹಾಪ್‌ಕಾಮ್ಸ್ ಸಂಸ್ಥೆಯು ಮೂಲತಃ ರೈತರ ಸಂಸ್ಥೆಯಾಗಿದ್ದು, ಇದರ ಮೂಲಕ ತೋಟಗಾರಿಕೆ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ತೋಟಗಾರಿಕೆ ವಹಿವಾಟು ಅತ್ಯಂತ ಸೂಕ್ಷ್ಮವಾದ ತಾಂತ್ರಿಕ ವಿಷಯವಾಗಿದ್ದು, ರೈತರ ಹಿತದೃಷ್ಟಿಯಿಂದ ಪರಿಣಿತ ತಂತ್ರಜ್ಞಾನವನ್ನು ಅಳವಡಿಸುವ ಅವಶ್ಯಕತೆ ಇರುತ್ತದೆ. ಈ ಸಂಸ್ಥೆಯನ್ನು ತೋಟಗಾರಿಕೆ ಇಲಾಖೆಯೇ ಹುಟ್ಟುಹಾಕಿರುತ್ತದೆ. ಹಾಪ್‌ಕಾಮ್ಸ್‌ನ ಆಡಳಿತವನ್ನು ರೈತರ ಹಿತದೃಷ್ಟಿಯಿಂದ ಉತ್ತಮಗೊಳಿಸಬೇಕಾಗಿರುವುದರಿಂದ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಮರಳಿ ಹಿಂಪಡೆಯಲಾಗಿದೆ.

(ಈ) ಮೇಲಿನ (ಇ) ನಲ್ಲಿ ಉತ್ತರಿಸಿರುವಂತೆ.

746 (290) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಅಪಾರ ಪ್ರಮಾಣದ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕರ್ನಾಟಕ ಸಾವಯವ ಗೊಬ್ಬರ ನಿಗಮಕ್ಕೆ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸೂಕ್ತವಲ್ಲವೇ ;

(ಆ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಬೇಕಾಗುವ ಸೌಲಭ್ಯಗಳೇನು ;

(ಇ) ಕೆ.ಸಿ.ಡಿ.ಸಿ. ಮತ್ತೊಂದು ಘಟಕ ಪ್ರಾರಂಭಿಸಲು ಉದ್ದೇಶಿಸಿದೆಯೇ ;

(ಈ) ಹಾಗಿದ್ದಲ್ಲಿ, ಇದಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆ ಜಾಗ ನೀಡಿದೆಯೇ ;

(ಉ) ತ್ಯಾಜ್ಯ ವಿಲೇವಾರಿಗೆ ಬೆಂಗಳೂರು ಮಹಾನಗರ ಪಾಲಿಕೆ ಕೆ.ಸಿ.ಡಿ.ಸಿ.ಗೆ ನೀಡುವ ಹಣವೆಷ್ಟು (ಒಂದು ವರ್ಷದ ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :–

(ಅ) ಹೌದು.

(ಆ) ಮೂಲಭೂತ ಸೌಕರ್ಯ ಕಲ್ಪಿಸುವ ಸಲುವಾಗಿ ಆರ್ಥಿಕ ನೆರವಿನ ಅವಶ್ಯಕತೆ ಇದೆ.

(ಇ) ಇಲ್ಲಾ. ಆದರೆ ಹಾಲಿ ಇರುವ ಘಟಕದ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವಿದೆ.

(ಈ) ಹೌದು.